
# ಅಪರೂಪದ ಮಕ್ಕಳ ಕವಿ ಎನ್. ಶ್ರೀನಿವಾಸ ಉಡುಪ

ಕನ್ನಡದ ಮಕ್ಕಳ ಮನೋಲೋಕಕ್ಕೆ ಕಲ್ಲುಸಕ್ಕರೆಯ ಸವಿಯಂತೆ ಮತ್ತೆ ಮತ್ತೆ ಒದಗಬೇಕಾದ ಕವಿ ಎನ್. ಶ್ರೀನಿವಾಸ ಉಡುಪ. ಮಕ್ಕಳ ಸಾಹಿತ್ಯದ ಮೌಲ್ಯವರ್ಧನೆ ಮಾಡಿದ ಬೆರಳೆಣಿಕೆಯ ಕವಿಗಳಲ್ಲೊಬ್ಬರು ಎನ್ನುವುದು ಉಡುಪರ ಬರವಣಿಗೆಯ ಅಗ್ಗಳಿಕೆ.

ತೀರ್ಥಹಳ್ಳಿ ತಾಲ್ಲೂಕಿನ ನೊಣಬನೂರು ಗ್ರಾಮದ ಉಡುಪರು, ವಿಜ್ಞಾನ ಅಧ್ಯಾಪಕರಾಗಿ ವೃತ್ತಿ ಆರಂಭಿಸಿ, ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರಾದವರು. ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ನೆಲೆಸಿದ್ದ ಅವರು, ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಮೂಲ್ಯವಾದುದು. 'ಕುಂಭಕರ್ಣನ ನಿದ್ದೆ', 'ಕನ್ನಡನಾಡಿನ ಕೂಸುಮರಿ', 'ಪಾಪು ಪದ್ಯಗಳು' ಸಂಕಲನದ ಪದ್ಯಗಳನ್ನು ಓದಿನ ರುಚಿ ಬಲ್ಲ ಎಳೆಯರು ಮರೆಯಲಾದೀತೆ? 'ಬೆರಳುಗಳು', 'ಹಿಡಿಂಬನ ತೋಟ' ನಾಟಕಗಳು, 'ಗೂಬಜ್ಜಿಯ ಗೊರಕೆ' ಸಂಕಲನದ ಕಥೆಗಳು ಎಲ್ಲ ತಲೆಮಾರಿನ ಮಕ್ಕಳ ಮನಸ್ಸನ್ನೂ ರಂಜಿಸುವಂತಹವು ಅರಳಿಸುವಂತಹವು.

ಎಳೆಯರಿಗೆ ಮಾತ್ರವಲ್ಲ, ಹಿರಿಯರಿಗಾಗಿಯೂ ಉಡುಪರು ಸಾಕಷ್ಟು ಬರವಣಿಗೆ ಮಾಡಿದ್ದಾರೆ. 'ನಾಲ್ಕು ಸಾಲು' (ಕವಿತೆಗಳು), 'ವಸ್ತು ವಿನ್ಯಾಸ', 'ಆಸ್ವಾದ', 'ಮಾರ್ದನಿ' (ಪ್ರಬಂಧ ಸಂಕಲನಗಳು), 'ಅಂತರ್ಧಾನ', 'ವ್ಯವಧಾನ' (ಅಂಕಣ ಬರಹಗಳು) ಪ್ರಮುಖ ಕೃತಿಗಳು. 'ಸುಧಾ' ಪತ್ರಿಕೆಗೆ ವೈನತೇಯ ಹೆಸರಿನಲ್ಲಿ, ಹತ್ತು ವರ್ಷಗಳ ಕಾಲ ಬರೆದ 'ವಿಚಾರಲಹರಿ' ಬರಹಗಳು, ಉಡುಪರ ವಿನಯ, ವಿದ್ವತ್ತು, ವಿಮರ್ಶಾಪ್ರಜ್ಞೆ ಹಾಗೂ ಭಾಷೆಯ ಸೊಗಸಿಗೆ ನಿದರ್ಶನದಂತಿವೆ. ಅವರ ಆಸಕ್ತಿಯ ಮತ್ತೊಂದು ಕ್ಷೇತ್ರ ಅನುವಾದ. 'ಗುಡಿಸೋಣ ಸಿಂಗರಿಸೋಣ' ಅನುವಾದಿತ ಕೃತಿ. ಮಕ್ಕಳಿಗಾಗಿ ಅನುವಾದಿಸಿದ ಪುಸ್ತಕ, 'ಸತ್ಯಜಿತ್ ರೇ ಕಥೆಗಳು.'

ಶ್ರೀನಿವಾಸ ಉಡುಪರು ಏನೆಲ್ಲವನ್ನು ಬರೆದಿದ್ದರೂ, ಕನ್ನಡ ಓದುಗರು ಅವರನ್ನು ಸದಾ ನೆನಪಿಸಿಕೊಳ್ಳಬೇಕಾಗಿರುವುದು ಮಕ್ಕಳ ಕವಿಯಾಗಿಯೇ. 'ಕುಂಭಕರ್ಣನ ನಿದ್ದೆ' ಕೃತಿಯೊಂದೇ ಸಾಕು, ಉಡುಪರ ಕಾವ್ಯಶಕ್ತಿಯ ನಿದರ್ಶನಕ್ಕೆ. ರಾಮ ಲಂಕೆಯ ಮೇಲೆ ದಂಡೆತ್ತಿ ಬಂದಾಗಿದೆ. ರಾವಣನಿಗೆ ಸೋಲಿನ ರುಚಿ ಹತ್ತಿದೆ. ಆಗ ಅವನು ತನ್ನ ಸಹೋದರ ಕುಂಭಕರ್ಣನ ನೆರವು ಬಯಸಿದ್ದಾನೆ. ಆದರೆ, ಈ ಪುರಾಣಲೋಕ ಸೃಜಿಸಿಕೊಂಡ ಮಹಾನ್ ನಿದ್ದೆಗುಳಿ ಕುಂಭಕರ್ಣನನ್ನು ನಿದ್ದೆಯಿಂದ ಎಬ್ಬಿಸುವುದೇನು ಸಾಮಾನ್ಯವೆ? ರಾಮಾಯಣದ ಈ ರಸಪ್ರಸಂಗವನ್ನು ತಿಳಿಗನ್ನಡದಲ್ಲಿ, ಎಳೆಯರ ಕನ್ನಡದಲ್ಲಿ ಉಡುಪರು ಬಹು ರಂಜನೀಯವಾಗಿ ನಿರೂಪಿಸಿದ್ದಾರೆ. ಕನ್ನಡದ ನುಡಿ ಮಾರ್ದವವನ್ನು ಎಳೆಯರ ಮನಸ್ಸಿಗಿಳಿಸುವ ಬಹು ವಿರಳ ರಚನೆಗಳ ಸಾಲಿಗೆ ಸೇರುವ ಈ ಕವಿತೆಗೆ, 'ಪ್ರಜಾವಾಣಿ ದೀಪಾವಳಿ ಸಂಚಿಕೆ'ಯ ಶಿಶು ಕಾವ್ಯ ಸ್ಪರ್ಧೆಯಲ್ಲಿ ಬಹುಮಾನ ಸಂದಿದೆ.




ಮಕ್ಕಳ ಸಾಹಿತ್ಯದ ಎರಡು ಪ್ರಮುಖ ಉದ್ದೇಶಗಳಾದ ಮನರಂಜನೆ ಹಾಗೂ ಮನೋವಿಕಾಸದ ಸಾಧ್ಯತೆಗಳೆರಡನ್ನೂ ಉಡುಪರ ಬರವಣಿಗೆಯಲ್ಲಿ ಪರಿಣಾಮಕಾರಿಯಾಗಿ ಕಾಣಬಹುದು. ನೀತಿಬೋಧನೆ ಗೌಣವಾಗಿ, ಮಕ್ಕಳ ರಂಜನೆಯೇ ಪ್ರಧಾನವಾಗಿರುವುದನ್ನು ಅವರ ಪದ್ಯ-ಕಥೆಗಳಲ್ಲಿ ನೋಡಬಹುದು. ಎಳೆಯ ಮನಸ್ಸುಗಳನ್ನು